# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 194 (215)
ಉತ್ತರಿಸಬೇಕಾದ ದಿನಾಂಕ : 14.02.2024
ಸದಸ್ಯರ ಹೆಸರು : ಶ್ರೀಮತಿ ಉಮಾಶ್ರೀ(ನಾಮ ನಿರ್ದೇಶನ ಹೊಂದಿದವರು)
ಉತ್ತರಿಸುವ ಸಚಿವರು : ಮಾನ್ಯ ಕಂದಾಯ ಸಚಿವರು

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಇಲ್ಲಿಯವರೆಗೆ ಕೋವಿಡ ನಿಂದ ಮೃತಪಟ್ಟವರ ಸಂಖ್ಯೆ ಎಷ್ಟು; ಇದುವರೆಗೆ ಮೃತಪಟ್ಟವರ ಎಷ್ಟು ಕುಟುಂಬಗಳಿಗೆ ಪರಿಹಾರ ಮೊತ್ತವನ್ನು ನೀಡಲಾಗಿದೆ. (ಜಿಲ್ಲಾವಾರು ಮಾಹಿತಿ ನೀಡುವುದು)) | ರಾಜ್ಯದಲ್ಲಿ ಕೋವಿಡ್-19 ಸಾಂಕ್ರಾಮಿಕ ವೈರಾಣುವಿನಿಂದಾಗಿ ಮೃತಪಟ್ಟ 67734 ಜನರ ವಾರಸುದಾರರು ಪರಿಹಾರಕ್ಕಾಗಿ ಅರ್ಜಿ ಸಲ್ಲಿಸಿರುತ್ತಾರೆ.<br><br>ಕೇಂದ್ರ ಸರ್ಕಾರದ ಮಾರ್ಗ ಸೂಚಿಯನ್ವಯ ಕೋವಿಡ್ನಿಂದ ಮೃತಪಟ್ಟ ಎಲ್ಲಾ ಪ್ರಕರಣಗಳಲ್ಲಿ ರೂ.50,000/-ಗಳ ಪರಿಹಾರ ಧನವನ್ನು ರಾಜ್ಯ ವಿಪತ್ತು ಪರಿಹಾರ ನಿಧಿ (SDRF) ಯಿಂದ ನೇರಹಣ ಸಂದಾಯದ ಮೂಲಕ ಫಲಾನುಭವಿಗಳಿಗೆ ಪಾವತಿಸಲಾಗುತ್ತಿದ್ದು, ರಾಜ್ಯದಲ್ಲಿ ಒಟ್ಟು 67734 ಅರ್ಜಿಗಳು ಸ್ವೀಕೃತವಾಗಿದ್ದು, ಈ ಪೈಕಿ ಪರಿಶೀಲಿಸಿ ಜಿಲ್ಲಾಧಿಕಾರಿಗಳು/ ಬಿಬಿಎಂಪಿ ಜಂಟಿ ಆಯುಕ್ತರಿಂದ ಅನುಮೋದಿಸಲಾದ NPCI ಮ್ಯಾಪ್ ಆಗಿರುವ 65507 ಪ್ರಕರಣಗಳಿಗೆ ತಲಾ ರೂ.50,000/-ದಂತೆ ಪರಿಹಾರ ವಿತರಿಸಲಾಗಿದೆ. ಕೋವಿಡ್ ಪರಿಹಾರಕ್ಕೆ ಸಂಬಂಧಿಸಿದಂತೆ ಯಾವುದಾದರು ಸಮಸ್ಯೆ ಇದ್ದ ಪ್ರಕರಣಗಳಲ್ಲಿ ಜಿಲ್ಲಾಮಟ್ಟದ/ ಬಿಬಿಎಂಪಿ ವಲಯ ವ್ಯಾಪ್ತಿಯ ಕುಂದುಕೊರತೆ ಸಮಿತಿ ಮೂಲಕ ಯಾವುದೇ ವಿಳಂಬವಿಲ್ಲದೆ ಎಲ್ಲಾ ಅರ್ಹ ಪ್ರಕರಣಗಳಲ್ಲಿ ಪರಿಹಾರ ವಿತರಿಸಲಾಗಿದೆ.<br>ಮುಂದುವರೆದು, ರಾಜ್ಯ ಸರ್ಕಾರವು ಬಿ.ಪಿಎಲ್ ಕುಟುಂಬದವರಿಗೆ ಘೋಷಿಸಿರುವ ಹೆಚ್ಚುವರಿ ರೂ.1.00 ಲಕ್ಷಪರಿಹಾರವನ್ನು ಪಡೆಯಲು ಕೋವಿಡ್ ನಿಂದ ಮೃತ ಪ್ರಕರಣವು ಆರೋಗ್ಯ ಇಲಾಖೆಯ ದತ್ತಾಂಶದಲ್ಲಿರ ಬೇಕು ಮತ್ತು ಮೃತ ವ್ಯಕ್ತಿಯು ಹಾಗೂ ಅರ್ಜಿದಾರರು ಒಂದೇ ಬಿಪಿಎಲ್ ಕುಟುಂಬಕ್ಕೆ ಸೇರಿದವರಾಗಿರಬೇಕು. ಈ ಪೈಕಿ ಒಟ್ಟು 14709 ಅರ್ಜಿಗಳು ಸ್ವೀಕೃತವಾಗಿದ್ದು, ಪರಿಶೀಲನೆಯ ನಂತರ ಜಿಲ್ಲಾಧಿಕಾರಿಗಳು / ಬಿಬಿಎಂಪಿ ಜಂಟಿ ಆಯುಕ್ತರಿಂದ ಅನುಮೋದನೆಯಾದ 14218 ಅರ್ಹ ಪ್ರಕರಣಗಳಿಗೆ ತಲಾ ರೂ.1.00 ಲಕ್ಷ ಪರಿಹಾರವನ್ನು ಚೆಕ್ ಮೂಲಕ ವಿತರಿಸಲಾಗಿದೆ.<br>**ಜಿಲ್ಲಾವಾರು ,ಮಾಹಿತಿ ಅನುಬಂಧದಲ್ಲಿ ಲಗತ್ತಿಸಿದೆ.** |
| ಆ) | ಇನ್ನೂ ಎಷ್ಟು ಕುಟುಂಬಗಳಿಗೆ ಪರಿಹಾರ ಮೊತ್ತವನ್ನು ವಿತರಿಸುವುದು ಬಾಕಿಯಿದೆ; ಈ ಕುಟುಂಬಗಳಿಗೆ ಪರಿಹಾರಧನವನ್ನು ನೀಡುವಲ್ಲಿ ವಿಳಂಬವಾಗುತ್ತಿರಲು ಕಾರಣವೇನು; | ಕೇಂದ್ರ ಸರ್ಕಾರದ ಮಾರ್ಗಸೂಚಿಯನ್ವಯ ಕೋವಿಡ ಪರಿಹಾರ ರೂ.50,000/- ಮೊತ್ತವನ್ನು ಕಡ್ಡಾಯವಾಗಿ ಆಧಾರ್ ಆಧಾರಿತ ನೇರ ಹಣ ಸಂದಾಯದ ಮೂಲಕ ಪಾವತಿಸಬೇಕಾಗಿರುತ್ತದೆ. 1305 ಪ್ರಕರಣಗಳಲ್ಲಿ ಫಲಾನುಭವಿಗಳ ಬ್ಯಾಂಕ್ ಆಧಾರ್ ಸಂಖ್ಯೆಯು NPCI ನಲ್ಲಿ ಮ್ಯಾಪ್ ಆಗದಿರುವ ಕಾರಣ ತಲಾ ರೂ.50,000/- ಪರಿಹಾರಧನ ಪಾವತಿ ಮಾಡಲು |

| | | |
|---|---|---|
| | | ಸಾಧ್ಯವಾಗಿರುವುದಿಲ್ಲ. ಇಂತಹ ಪ್ರಕರಣಗಳಲ್ಲಿ ಫಲಾನುಭವಿಗಳ ಬ್ಯಾಂಕ್ ಆಧಾರ್ NPCI ನಲ್ಲಿ ಜೋಡಣೆ ಮಾಡಿಕೊಳ್ಳುವಂತೆ ಅರ್ಜಿದಾರರ ಮೊಬೈಲ್ಗೆ SMS ಕಳುಹಿಸಲಾಗುತ್ತಿದೆ ಹಾಗೂ ಜಿಲ್ಲಾಧಿಕಾರಿಗಳ ಕಾರ್ಯಾಲಯ/ಜಂಟಿ ಆಯುಕ್ತರು, ಬಿಬಿಎಂಪಿ ಕಛೇರಿಗೆ ಈ ಕುರಿತು ಮುಂದಿನ ಕ್ರಮಕ್ಕಾಗಿ ಪಟ್ಟಿಯನ್ನು ಕಳುಹಿಸಲಾಗಿದೆ ಮತ್ತು ಬಿ.ಬಿ.ಎಂ.ಪಿ ತಂತ್ರಾಂಶದಲ್ಲಿ ತಹಸೀಲ್ದಾರ್ರವರ ಲಾಗಿನ್ನಲ್ಲಿಯೂ ಸಹ ಸದರಿ ಪ್ರಕರಣಗಳ ಪಟ್ಟಿಯು ಲಭ್ಯವಿದ್ದು, ಸಂಬಂಧಪಟ್ಟ ಅರ್ಜಿದಾರರನ್ನು ಸಂಪರ್ಕಿಸಿ ಆಧಾರ್ ಹಾಗೂ NPCI ಮ್ಯಾಪಿಂಗ್ ಮಾಡಿಸುವಲ್ಲಿ ಅಗತ್ಯ ಕ್ರಮ ಕೈಗೊಳ್ಳಲಾಗುತ್ತಿದೆ.<br><br>ಉಳಿದಂತೆ 72 ಪ್ರಕರಣಗಳಲ್ಲಿ ಅರ್ಜಿದಾರರು ಸರಿಯಾದ ದಾಖಲೆಗಳನ್ನು ಸಲ್ಲಿಸದ ಕಾರಣ ತಾಲ್ಲೂಕು/ಜಿಲ್ಲಾಮಟ್ಟದಲ್ಲಿ ಅನುಮೋದನೆಗೆ ಬಾಕಿ ಇರುತ್ತದೆ. ಸದರಿ ಪ್ರಕರಣಗಳಲ್ಲಿ ಅಗತ್ಯ ದಾಖಲೆಗಳನ್ನು ಸಲ್ಲಿಸುವಂತೆ ಸಂಬಂಧಪಟ್ಟ ಜಿಲ್ಲಾ/ತಾಲ್ಲೂಕುಗಳಲ್ಲಿ ಅರ್ಜಿದಾರರಿಗೆ ತಿಳುವಳಿಕೆ ನೀಡಲಾಗಿದೆ.<br><br>ಉಳಿಕೆ 850 ಪ್ರಕರಣಗಳು ಏಪ್ರಿಲ್ 2023ರ ನಂತರ NPCI Mapping ಆಗಿದ್ದು, ಅನುದಾನ ಬಿಡುಗಡೆಗಾಗಿ ಬೇಡಿಕೆ ಸಲ್ಲಿಸಲಾಗಿದ್ದು, ಬಿಡುಗಡೆಯಾದ ಕೂಡಲೇ ಪರಿಹಾರ ಪಾವತಿಸಲಾಗುವುದು |
| ಇ) | ಕೋವಿಡ್‌ನಿಂದ ಮೃತಪಟ್ಟವರ ಅವಲಂಬಿತರಿಗೆ ಕೇಂದ್ರ ಸರ್ಕಾರದಿಂದ ಯಾವ ಯಾವ ಪರಿಹಾರ ವ್ಯವಸ್ಥೆಗಳನ್ನು ಮಾಡಲಾಗಿದೆ; | ಕೇಂದ್ರ ಸರ್ಕಾರದ ಮಾರ್ಗಸೂಚಿಯನ್ವಯ ಕೋವಿಡ್‌ನಿಂದ ಮೃತಪಟ್ಟ ಎಲ್ಲಾ ಪ್ರಕರಣಗಳಲ್ಲಿ ರೂ.50,000/-ಗಳ ಪರಿಹಾರ ಧನವನ್ನು ರಾಜ್ಯ ವಿಪತ್ತು ಪರಿಹಾರನಿಧಿ (SDRF) ಯಿಂದ ಸಾಮಾಜಿಕ ಭದ್ರತೆ ಮತ್ತು ಪಿಂಚಣಿಗಳ ನಿರ್ದೇಶನಾಲಯದಿಂದ ನೇರ ಹಣಸಂದಾಯದ ಮೂಲಕ ಫಲಾನುಭವಿಗಳಿಗೆ ಪಾವತಿಸಲಾಗುತ್ತಿದೆ. |
| ಈ) | ಕೋವಿಡ್ ನಿಂದ ಮೃತಪಟ್ಟ ಕಾರ್ಮಿಕರಿಗೆ ಮತ್ತು ಖಾಸಗಿ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದವರಿಗೆ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಯಾವ ಯೋಜನೆಗಳನ್ನು ಜಾರಿಗೆ ತಂದಿರುತ್ತದೆ? | ಕೋವಿಡ್ ನಿಂದ ಮೃತಪಟ್ಟ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಅವಲಂಭಿತರಿಗೆ ರೂ.204 ಲಕ್ಷಗಳ ಪರಿಹಾರ ಧನವನ್ನು ಮಂಡಳಿಯ ವತಿಯಿಂದ ನೀಡುವುದಾಗಿ ದಿನಾಂಕ:17.09.2021ರಂದು ಆದೇಶ ಹೊರಡಿಸಲಾಗಿದೆ. |

**ಕಡತ ಸಂಖ್ಯೆ:ಆರ್‌ಡಿ 21 ಕೆಎಟಿ ಎಸ್‌ಎಸ್‌ಪಿ 2024**

**( ಕೃಷ್ಣ ಬೈರೇಗೌಡ)**
**ಕಂದಾಯ ಸಚಿವರು**

ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀಮತಿ ಉಮಾಶ್ರೀ (ನಾಮನಿರ್ದೇಶನ ಹೊಂದಿದವರು) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 194 (215)ಕ್ಕೆ ಅನುಬಂಧ

| SL.NO | District | APPLICATION RAISED | Exgratia Of Rs.50000/- paid | Rs.1.00 lakh compensation paid to eligible BPL families |
|---|---|---|---|---|
| 1 | Bagalkot | 1606 | 1585 | 151 |
| 2 | Ballari | 1768 | 1751 | 471 |
| 3 | Bangalore Rural | 2000 | 1954 | 533 |
| 4 | Belagavi | 4662 | 4498 | 421 |
| 5 | Bengaluru | 1584 | 1454 | 567 |
| 6 | Bengaluru BBMP | 15925 | 14979 | 2812 |
| 7 | Bidar | 1646 | 1610 | 185 |
| 8 | Chamarajanagar | 997 | 988 | 326 |
| 9 | Chikballapur | 1266 | 1241 | 256 |
| 10 | Chikkamagaluru | 1235 | 1207 | 273 |
| 11 | Chitradurga | 1043 | 1020 | 166 |
| 12 | Dakshina Kannada | 2116 | 2059 | 523 |
| 13 | Davanagere | 1995 | 1975 | 352 |
| 14 | Dharwad | 2127 | 2085 | 467 |
| 15 | Gadag | 679 | 672 | 151 |
| 16 | Hassan | 2016 | 1997 | 749 |
| 17 | Haveri | 1287 | 1277 | 479 |
| 18 | Kalaburagi | 1597 | 1519 | 313 |
| 19 | Kodagu | 640 | 639 | 172 |
| 20 | Kolar | 1619 | 1453 | 349 |
| 21 | Koppal | 880 | 865 | 260 |
| 22 | Mandya | 1692 | 1671 | 440 |
| 23 | Mysuru | 3854 | 3776 | 890 |
| 24 | Raichur | 998 | 977 | 169 |
| 25 | Ramanagara | 992 | 985 | 241 |
| 26 | Shivamogga | 1999 | 1955 | 415 |
| 27 | Tumakuru | 3060 | 2969 | 785 |
| 28 | Udupi | 1329 | 1297 | 225 |
| 29 | Uttara Kannada | 1279 | 1264 | 447 |
| 30 | Vijayanagar | 1377 | 1344 | 304 |
| 31 | Vijayapura | 2028 | 2006 | 192 |
| 32 | Yadgir | 438 | 435 | 134 |
| | **Total** | **67734** | **65507** | **14218** |